**ಅಸಲು ದಾವ ಸಂಖ್ಯೆ: 1135/2017**

**ಪಿ.ಡಬ್ಲ್ಯೂ -3**

**ದಿಃ 02-04-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ RCI ರವರಿಂದಃ-**

1. ನಾನು ವಾಸವಿರುವುದು ಸುಭಾಷ ಗಲ್ಲಿ, ಗಾಂಧಿನಗರ, ಬೆಳಗಾವಿಯಲ್ಲಿ ಹಾಗೂ ದಾವಾ ಸ್ವತ್ತು ಬೆಳಗಾವಿಯ ಹಿಂಡಲಗಾ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ವಾದಿ ಈ ದಾವೆಯನ್ನು ಯಾರ ಯಾರ ವಿರುದ್ಧ ಹಾಕಿರುತ್ತಾರೆ ಎಂದು ನನಗೆ ವಿವರವಾಗಿ ತಿಳಿದಿಲ್ಲ ಎಂದರೆ ಸರಿ. ವಾದಿಯ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಹೇಳಬಲ್ಲೆ, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ನನ್ನ ಆಸ್ತಿ, ಪೂರ್ವಕ್ಕೆ ಖಾಲಿ ಜಾಗ ಹಾಗೂ ಉತ್ತರಕ್ಕೆ ಪಾಟೀಲ ರವರ ಆಸ್ತಿ ಇರುತ್ತದೆ. ವಾದಿಯ ಪ್ಲಾಟನ ಪಕ್ಕದಲ್ಲಿ ನನ್ನ ಆಸ್ತಿ ಇರುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರಪಡಿಸಿರುವುದಿಲ್ಲ. ದಾವಾ ಆಸ್ತಿಯು ಆರ್ ಎಸ್ ನಂಬರ 191/1 ರಲ್ಲಿ ಬರುತ್ತದೆ. ಸದರಿ ಆಸ್ತಿ ಮೂಲತಃ ಓರ್ವ ಕುಲಕರ್ಣಿ ರವರಿಗೆ ಸೇರಿತ್ತು. ದಾವಾ ಆಸ್ತಿಯು defence service employees co-operative housing society Limited ರವರಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಪ್ರತಿವಾದಿಯರ ಪರಿಚಯ ನನಗೆ ಇರುವುದಿಲ್ಲ. ಪ್ರತಿವಾದಿಯರು ಮೇಲೆ ಹೇಳಿದ ಸೊಸೈಟಿಯ ಚೇರ್ಮನ ಹಾಗೂ ಸೆಕ್ರೆಟರಿ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸದರಿ ಸೊಸೈಟಿಗೆ ಸೇರಿರುವ ಕಾರಣ ಕುಲಕರ್ಣಿ ರವರಿಗೆ ವಾದಿಗೆ ಸದರಿ ಸ್ವತ್ತನ್ನು ಮಾರಾಟಕ್ಕೆ ಕೊಡುವ ಅಧಿಕಾರವೇ ಇರಲಿಲ್ಲ ಎಂದರೆ ಸರಿಯಲ್ಲ.

2. ವಾದಿ ಹಾಗೂ ನನ್ನ ಪ್ಲಾಟಗಳು ಅಕ್ಕಪಕ್ಕದಲ್ಲಿ ಇರುವ ಕಾರಣ ನನಗೆ ವಾದಿಯ ಒಳ್ಳೆಯ ಪರಿಚಯ ಇರುತ್ತದೆ ಎಂದರೆ ಸರಿ. ನನಗೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ

ನೋಟಿಸ ಬಂದಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ವಾದಿಯ ವಕೀಲರು ತಯಾರಿಸಿರುತ್ತಾರೆ. ವಾದಿಯು ದಾವಾ ಸ್ವತ್ತಿನಲ್ಲಿ ಕಬ್ಜೆಯಲ್ಲಿ ಇರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಕುರಿತು ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**